(*c*) The department is not aware of the resolution passed by the District Development Council for handing over the building to the Taluk Development Board. But the Government had issued an order for handing over the same to the Municipality *vide* Government Letter No. HMA 206 T.D.B. 72 dated 28th September 1972.

(*d*) Does not arise.

ಶ್ರೀ ಡಿ.ಟಿ. ಮಾಯಣ್ಣ.—ಈ ಕಟ್ಟಡ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲಿಗೆ ಸೇರಿದ್ದು. ಇಲ್ಲಿದ್ದ ಆಸ್ಪತ್ರೆಯನ್ನು ಬವಲಾಷಣೆ ಮಾಡಿದ ಮೇಲೆ ಆ ಕಟ್ಟಡವನ್ನು ತಾಲ್ಲೂಕ್ ಬೋರ್ಡಿಗೆ ವಹಿಸಿಕೊಡುವುದು ಸರ್ಕಾರದ ಕರ್ತವ್ಯವಲ್ಲವೇ ?

† ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಈ ಕಟ್ಟಡವನ್ನು ತಾಲ್ಲೂಕ್ ಅಭಿವೃದ್ಧಿ ಮಂಡಲಿಗೆ ಕೊಡಬೇಕೆಂದು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನವರು ತೀರ್ಮಾನ ಮಾಡಿದ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ಮಧ್ಯ ಈ ಕಟ್ಟಡ ತಮಗೆ ಬೇಕೆಂದು ಮುನಿಸಿಪಾಲಿಟಿಯವರು ಕೇಳಿದರು. ಆದರಂತೆ ೧೯೭೨ರಲ್ಲಿ ಈ ಕಟ್ಟಡವನ್ನು ಪುರಸಭೆಗೆ ಕೊಡಬೇಕೆಂದು ತೀರ್ಮಾನವಾಯಿತು. ಆದರೆ ಅವರು ಅದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ. ಈಗ ಈ ಕಟ್ಟಡ ನಾದುರಸ್ತಿಗಿದೆ. ಆದ ಕಾರಣ ಈ ಕಟ್ಟಡವನ್ನು ದುರಸ್ತಿ ಮಾಡಿದ ಮೇಲೆ, ಅದನ್ನು ಸರ್ಕಾರವೇ ಉಪಯೋಗಿಸಬೇಕೇ ಅಥವಾ ಬೇರೆ ಯವರಿಗೆ ಕೊಡಬೇಕೇ ಎಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ.ಟಿ. ಮಾಯಣ್ಣ.—ಈ ಕಟ್ಟಡವನ್ನು ತಾಲ್ಲೂಕ್ ಅಭಿವೃದ್ಧಿ ಮಂಡಲಿಗೆ ಕೊಡಬೇಕೆಂದು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಒಂದು ರೆಸ್ಯೂಲ್ಯೂಷನ್ ಆಗಿದೆ. ಅಲ್ಲದೆ ಈ ಕಟ್ಟಡದ ಜಾಗ ಮುನಿಸಿಪಾಲಿಟಿಗೆ ಸೇರಿದ ಜಾಗದಲ್ಲಿ ಇಲ್ಲ, ಅದು ರೆವಿನ್ಯೂ ಲ್ಯಾಂಡ್‌ನಲ್ಲಿದೆ. ಆದ ಕಾರಣ ಇದನ್ನು ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರಿಗೆ ವಹಿಸಿಕೊಡುವುದು ಒಳ್ಳೆಯದಲ್ಲವೇ ?

ಶ್ರೀ ಎಂ. ಮಲ್ಲಪ್ಪ.—ಅದನ್ನು ಪರಿಶೀಲನೆ ಮಾಡಲಾಗುತ್ತದೆ.

## Creation of Cottion Board

1014. SRI SUDHINDRA RAO KASBE (Kalmala).—Will the Minister for Agriculture and Parliamentary Affairs be pleased to state :

(*a*) whether Goverament is aware that the 80% of the Cotton in the State is produced in Raichur District alone ;

(*b*) whether Government is also aware that the cotton market in Raichur is the second biggest in India ;

(*c*) whether Government has any proposal before them to create a Cotton Board in the State on the lines of Coffee Board -

(d) if so, when it will be created ?

SRI K. H. RANGANATH (Minister for Agriculture and Parliamentary Affairs).—

(*a*) No 30 to 45% of the States' total cotton production is from Raichur District.

(*b*) Raichur market is the Fourth biggest market in India.

---

Indicates that remarks or speeches have not been revised by the member concerned.

(c) No.

(d) Does not arise in view of the reply to (c).

ಶ್ರೀ ಸುಧೀಂದ್ರರಾವ್ ಕಸಬೆ. - ರಾಜ್ಯದಲ್ಲಿನ ಶೇಕಡಾ ೮೦ರಷ್ಟು ಹತ್ತಿಯನ್ನು ರಾಯಚೂರು ಜಿಲ್ಲೆಯಲ್ಲಿಯೇ ಬೆಳೆಯುತ್ತಿದ್ದರೂ ಸಹ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಶೇಕಡಾ ೩೦ ರಿಂದ ೪೫ ರಷ್ಟಿನ ರಾಜ್ಯದ ಒಟ್ಟು ಹತ್ತಿಯು ಉತ್ಪಾದನೆಯು ರಾಯಚೂರು ಜಿಲ್ಲೆಯಿಂದ ಬರುತ್ತಿದೆ ಎಂದು ಹೇಳಿದ್ದಾರೆ. ಮತ್ತು ಭಾರತದಲ್ಲಿಯೇ ನಾಲ್ಕನೇ ಮಾರುಕಟ್ಟೆಯಾಗಿದೆ ಎಂದು ಹೇಳಿದ್ದಾರೆ. ಆದರೆ ಇವೊತ್ತಿನ ದಿವಸ ಕಾಫಿ ಬೆಳೆಗಾರರಿಗೆ ಯಾವ ರೀತಿ ತೊಂದರೆಯಾಗುತ್ತಿದೆಯೋ ಅದೇ ರೀತಿ ಹತ್ತಿ ಬೆಳೆಯವರಿಗೂ ತೊಂದರೆಯಾಗುತ್ತಿದೆ. ಮುಖ್ಯವಾಗಿ ವರಲಕ್ಷ್ಮಿ ಹತ್ತಿ ಬೆಳೆಯುವವರಿಗೆ ತೊಂದರೆಯಾಗಿದೆ ಕಾಸ್ಟ್ ಆಫ್ ಕಲ್ಟಿವೇಷನ್ ಜಾಸ್ತಿಯಾಗಿದೆ. ಬೆಳೆದಂತಹ ಹತ್ತಿಯನ್ನು ರೈತರು ಮಾರುಕಟ್ಟೆಗೆ ತಂದ ಮೇಲೆ ಅಲ್ಲಿ ನ್ಯಾಯವಾದ ಧಾರಣೆ ಸಿಗದೆ ರೈತರು ಕಷ್ಟಕ್ಕೀಡಾಗಿದ್ದಾರೆ. ಮಾನ್ಯ ಕೃಷಿ ಮಂತ್ರಿಗಳು ನಮ್ಮ ರಾಯಚೂರು ಜಿಲ್ಲೆಗೆ ಬಂದಾಗ, ವ್ಯವಸಾಯದ ಅಭಿವೃದ್ಧಿಗಾಗಿ ವ್ಯವಸಾಯಕ್ಕೆ ಸಂಬಂಧ ಪಟ್ಟಂತೆ ಒಂದು ಡಿಗ್ರಿ ಕಾಲೇಜನ್ನು ತೆರೆಯಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಅದು ಇನ್ನೂ ಕಾರ್ಯಗತವಾಗಿಲ್ಲ. ಸರ್ಕಾರದವರು ನಮ್ಮ ರಾಯಚೂರು ಜಿಲ್ಲೆಯಲ್ಲಿ ಮೊಲತಾಯಿ ಧೋರಣೆಯಿಂದ ನೋಡುತ್ತಿದ್ದಾರೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಉತ್ತರ ನೀಡುತ್ತಾರೆ ?

*ಶ್ರೀ ಕೆ.ಎಚ್. ರಂಗನಾಥ್.— ಮಾನ್ಯ ಸದಸ್ಯರು ಈಗ ಪ್ರಸ್ತಾಪ ಮಾಡಿದಂಥ ಎರಡು ವಿಚಾರಗಳನ್ನು ಬೇರೆ ಸಮಯದಲ್ಲಿ ಪ್ರಸ್ತಾಪ ಮಾಡಿದರೆ. ಅದಕ್ಕೆ ನಾನು ಉತ್ತರ ಹೇಳುತ್ತೇನೆ. ಈಗ ಇಲ್ಲಿ ಮಾನ್ಯ ಸದಸ್ಯರು ಹತ್ತಿ ಬೆಳೆಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿದ್ದಾರೆ. ಕಾಫಿ ಮಂಡಲಿಯನ್ನು ರಚಿಸುವ ರೀತಿಯಲ್ಲಿಯೇ ಹತ್ತಿ ಮಂಡಲಿಯೊಂದನ್ನು ರಚಿಸುವ ವಿಚಾರ ಸರ್ಕಾರದ ಗಮನದಲ್ಲಿ ಇಲ್ಲವೆಂದು ಉತ್ತರ ಕೊಡಲಾಗಿದೆ. ಆದರೆ ಈ ಸಾರಿ ಕಾಟನ್ ಕಾರ್ಪೊರೇಷನ್ ಅವರು ೨೮ ಕೋಟಿ ರೂ. ಗಳಷ್ಟು ಮೊಲನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಖರೀದಿ ಮಾಡಿದ್ದಾರೆ. ಇದರಿಂದ ಹತ್ತಿ ಬೆಳೆಗಾರರಿಗೆ ಅನುಕೂಲವಾಗಿದೆ.

## National Rural Water Supply Schemes in Aurad Taluk

1101 SRI MANIKA RAO PATIL (Aurad).—Will the Minister for Rural Development and Panchayati Raj be pleased to state.—

(a) the number of NRWS Schemes so far taken up in Aurad taluk and how many of them have been commissioned and how many of them have remained to be commissioned;

(b) the number of villages heve been so far surveyed for NRWS Schemes and the total estimated cost of such schemes in each village,

(c) how many Village Panchayats have contributed their share of contribution for implementation of these schemes and when they have credited it. If they have paid their contribution the reasons why so far these schemes have not been sanctioned ?

SRI K. PRABHAKAR (Minister for Rural Development and Panchayati Raj).—

(a).—

| | | | |
|---|---|---|---|
| 1. | Number of NRWS Schemes taken up so far | ... | 13 |
| 2. | No. of NRWS Schemes commissioned | ... | 11 |
| 3. | No. of NRWS schemes to be commissioned | ... | 2 |